# ಸಿಂಗ್ ಈಸ್ ಕಿಂಗ್!



ಬಾಬಾ ರಾಮ್ ರಹೀಮ್ ಸಿಂಗ್! ಆಧ್ಯಾತ್ಮಿಕ ಸಂತ, ಜನಪದ ಗಾಯಕ, ಕ್ರೀಡಾಪಟು, ಸಿನಿಮಾ ನಟ, ನಿರ್ದೇಶಕ, ಸಂಗೀತ ನಿರ್ದೇಶಕ, ಕಲಾವಿದ, ಚಿತ್ರಕಥೆಗಾರ, ಚಿತ್ರಸಾಹಿತಿ, ಫ್ಯಾಶನ್ ಐಕಾನ್– ಈತನ ಅವತಾರಗಳು ಒಂದೆರಡಲ್ಲ! ಈತ ನಿರ್ಮಿಸಿದ ಮೊದಲ ಚಿತ್ರ 'ಎಂಎಸ್‌ಜಿ: ದಿ ಮೆಸೆಂಜರ್ ಆಫ್ ಗಾಡ್' ಸೆನ್ಸಾರ್ ವಿವಾದದ ಬೆನ್ನಲ್ಲೇ ಈಗ ಕೇಂದ್ರ ಫಿಲಂ ಸೆನ್ಸಾರ್ ಮಂಡಳಿಯ ಅಧ್ಯಕ್ಷೆ ಲೀಲಾ ಸ್ಯಾಮ್ಸನ್ ರಾಜೀನಾಮೆ ನೀಡಿದ್ದಾರೆ. ಸೆನ್ಸಾರ್ ಮಂಡಳಿಯಲ್ಲಿ ಕೇಂದ್ರ ಸರ್ಕಾರದ ಹಸ್ತಕ್ಷೇಪ ಅತಿಯಾಗಿದೆ ಎನ್ನುವುದು ಲೀಲಾ ಸ್ಯಾಮ್ಸನ್ ಕಾರಣ. ಸೆನ್ಸಾರ್ ಬೋರ್ಡ್ ಮತ್ತು ಮರುಪರಿಶೀಲನಾ ಮಂಡಳಿ ಎರಡೂ ಸರ್ಟಿಫಿಕೇಟ್ ನೀಡಲು ನಿರಾಕರಿಸಿದ ಸಿನಿಮಾವನ್ನು ಟ್ರಿಬ್ಯೂನಲ್‌ನಲ್ಲಿ (ಎರಡು ಶಬ್ದಗಳ 'ಮ್ಯೂಟ್' ಷರತ್ತಿನೊಂದಿಗೆ) ಪಾಸ್ ಮಾಡಿಸಿಕೊಂಡಿದ್ದೇನೆಂದು ಈ 'ಮಾಡರ್ನ್ ಸಂತ' ಹೇಳಿಕೊಂಡಿದ್ದಾನೆ. ಈ ಸಿನಿಮಾದಿಂದ ವಿವಿಧ ಧರ್ಮಗಳ ನಡುವೆ ಕಲಹಗಳು ನಡೆಯಲಿವೆ ಎಂದು ಸೆನ್ಸಾರ್ ಬೋರ್ಡ್ ಹೇಳಿದೆ. 'ಮಾದಕದ್ರವ್ಯ, ಮದ್ಯಪಾನ ಮತ್ತು ವೇಶ್ಯಾವಾಟಿಕೆಯ ವಿರುದ್ಧ ಈ ಚಿತ್ರದಲ್ಲಿ ಸಂದೇಶವಿದೆ. ಅದಕ್ಕೇಕೆ ಸೆನ್ಸಾರ್ ವಿರೋಧ?' ಎನ್ನುವುದು ಬಾಬಾಜಿ ಪ್ರಶ್ನೆ. ಈ ಮಧ್ಯೆ ಪಂಜಾಬ್ ಸರ್ಕಾರ ಚಿತ್ರವನ್ನು ನಿಷೇಧಿಸಿದೆ.

ಐದು ಕೋಟಿ 'ಹಾರ್ಡ್‌ಕೋರ್' ಹಿಂಬಾಲಕರಿರುವ ಬಾಬಾಜಿಗೆ ಸಿನಿಮಾ 'ಹಿಟ್' ಮಾಡಿಸುವುದು ಕಷ್ಟವೇನಲ್ಲ. ಕಳೆದ ವಾರ ಚಿತ್ರದ ಪ್ರೀಮಿಯರ್ ಷೋ ಇದೆಯೆಂದು ಪ್ರಕಟಿಸಿದಾಗ, ಗುರ್‌ಗಾಂವ್‌ನ ಲೀಸರ್ ವ್ಯಾಲಿ ಮೈದಾನಕ್ಕೆ 3 ಲಕ್ಷ ಜನ ದೌಡಾಯಿಸಿದ್ದರು. ಚಿತ್ರಕ್ಕೆ ಟ್ರಿಬ್ಯೂನಲ್‌ನ ಲಿಖಿತ ಸಮ್ಮತಿ ಇನ್ನೂ ಸಿಕ್ಕಿಲ್ಲವೆಂದು ಷೋ ರದ್ದಾದರೂ, ಬೆಂಬಲಿಗರ ನೃತ್ಯ– ಭಜನೆ ನಿಂತಿರಲಿಲ್ಲ.

ಹರಿಯಾಣದ ಸಿರ್ಸಾದಲ್ಲಿರುವ 'ದೇರಾ ಸಚ್ಚಾ ಸೌದಾ'ದ ಉತ್ತರಾಧಿಕಾರಿಯಾಗಿ ಆಯ್ಕೆಯಾದಾಗ ಈತನ ವಯಸ್ಸು 23 ವರ್ಷ. 1948ರಲ್ಲಿ ಶಾ ಮಸ್ತಾನಾ ಅವರು ಸ್ಥಾಪಿಸಿದ ದೇರಾ, ಹರಿಯಾಣದಲ್ಲಿ 25 ಆಶ್ರಮಗಳನ್ನು ಹೊಂದಿದೆ. ಪಂಜಾಬ್, ರಾಜಸ್ತಾನಗಳಲ್ಲೂ ಸಂಸ್ಥೆಗೆ ಯಥೇಚ್ಛ ಆಸ್ತಿಗಳಿವೆ. ಈ ಪಂಥದ ಘೋಷಿತ ಆಸ್ತಿ ಮೌಲ್ಯವೇ 240 ಕೋಟಿ ರೂಪಾಯಿ. ಯಾವುದೇ ಧರ್ಮ, ಜಾತಿಯ ಭೇದವಿಲ್ಲದೆ ಸದಸ್ಯರಾಗುವವರು 'ಇನ್ಸಾನ್' (ಮನುಷ್ಯ) ಎಂಬ ಸರ್‌ನೇಮ್ ಹಾಕಿಕೊಳ್ಳುತ್ತಾರೆ. 'ನಾನು ದೇವದೂತ. ನನ್ನಲ್ಲಿ ವಿಶೇಷ ಶಕ್ತಿಗಳೇನೂ ಇಲ್ಲ. ಎಲ್ಲರಂತೆ ಸಾಮಾನ್ಯ ಮನುಷ್ಯ. ಕುಡಿತ, ಅಮಲಿನ ದಾಸರಾಗಬೇಡಿ ಎನ್ನುತ್ತೇನೆ. ಇದಕ್ಕೆಂದೇ ಕೆಲವರು ನನ್ನನ್ನು ಕೊಲ್ಲಲು ಯತ್ನಿಸುತ್ತಿದ್ದಾರೆ' ಎನ್ನುವುದು ಬಾಬಾಜಿಯ ಡೈಲಾಗ್.

2007ರಲ್ಲಿ ಈತ ಹತ್ತನೇ ಸಿಖ್ ಗುರು ಗೋವಿಂದ ಸಿಂಗ್ ಅವರಂತೆ ವೇಷಭೂಷಣ ಹಾಕಿಕೊಂಡು ಪ್ರಚಾರ ಮಾಡಿದಾಗ, ಸಿಕ್ಖರು ಸಿಟ್ಟಿಗೆದ್ದು ಪ್ರತಿಭಟಿಸಿದರು. ಈತನನ್ನು ಟೀಕಿಸಿದ ಪತ್ರಕರ್ತ ರಾಮ್ ಛತ್ರಪತಿ ಕೊಲೆಯಾದ. ದೇರಾದ ಭಕ್ತೆಯೊಬ್ಬಳು ತನ್ನ ಮೇಲೆ ಬಾಬಾಜಿ ಅತ್ಯಾಚಾರ ನಡೆಸಿದ್ದಾನೆಂದು ದೂರು ನೀಡಿದ್ದಳು. 400ರಷ್ಟು ಭಕ್ತರ ಸಂತಾನಶಕ್ತಿ ಹರಣ ನಡೆಸಿದ್ದಾನೆಂಬ ಆರೋಪವೂ ಈತನ ಮೇಲಿದೆ.

ಇಷ್ಟಾಗಿಯೂ ಲಕ್ಷಾಂತರ ಯುವಜನರು ಈತನ 'ರು ಬ ರು ಕನ್ಸರ್ಟ್'ಗಳಿಗೆ ಮಾರುಹೋಗಿದ್ದಾರೆ. ಗುಲಾಬಿ ಬಣ್ಣದ ಪ್ಯಾಂಟು, ಚಿರತೆಯ ಚಿತ್ರಗಳುಳ್ಳ ಉದ್ದನೆಯ ಬೂಟು, ಗೋವಾ ಹ್ಯಾಟು, ರೇಬಾನ್ ಕನ್ನಡಕ ಧರಿಸಿ, ಗಿಟಾರ್ ಹಿಡಿದುಕೊಂಡು ಬಾಬಾಜಿ ಉಚ್ಚ ಸ್ವರದಲ್ಲಿ ಹಾಡುತ್ತಿದ್ದರೆ, ಭಕ್ತರು ಹುಚ್ಚೆದ್ದು ಕುಣಿಯುತ್ತಾರೆ. 'ರಾಮ್ ರಾಮ್ ರಾಮ್..' ಎಂಬ ಮಂತ್ರದೊಂದಿಗೆ ಭಾಂಗ್ರಾ ನೃತ್ಯದ ನಶೆ ಏರುತ್ತದೆ. '2006ರಲ್ಲಿ ನನ್ನ ಯುವ ಭಕ್ತನೊಬ್ಬ ನೀವೂ ಯುವಜನರಂತೆ ಡ್ರೆಸ್ ಮಾಡಿಕೊಳ್ಳಿ ಎಂದ. ಭಕ್ತರ ಕೋರಿಕೆ ಮನ್ನಿಸಬೇಕಾದದ್ದು ನನ್ನ ಧರ್ಮ' ಎನ್ನುತ್ತಾನೆ ಬಾಬಾಜಿ. ಕಳೆದ ಮೇ ತಿಂಗಳಲ್ಲಿ ಬಿಡುಗಡೆಯಾದ ಈತನ ಪಾಪ್ ಸಂಗೀತದ 'ಹೈವೇ ಲವ್ ಚಾರ್ಜರ್' ಎಂಬ ಆಲ್ಬಂನ 30 ಲಕ್ಷ ಪ್ರತಿಗಳು ಮಾರಾಟವಾಗಿವೆ!

ದೇರಾದ ಧ್ಯಾನಕೇಂದ್ರಗಳಲ್ಲಿ ಅಮಲು ಪದಾರ್ಥ ಸೇವನೆಯ ವಿರುದ್ಧ ಧ್ಯಾನಚಿಕಿತ್ಸೆ ನಡೆಯುತ್ತಿದೆ. ರಕ್ತದಾನ ಶಿಬಿರ ನಡೆಯುತ್ತವೆ. ಕಣ್ಣಿನ ಬ್ಯಾಂಕ್, ಬಡವರಿಗೆ ಸಬ್ಸಿಡಿ ಆಸ್ಪತ್ರೆ, ಶಾಲೆಗಳಿವೆ. ಆ್ಯಸಿಡ್ ಸಂತ್ರಸ್ತರು, ಸಲಿಂಗಿಗಳು, ಲಿಂಗಾಂತರಿಗಳು ಮತ್ತು ವೇಶ್ಯೆಯರಿಗೆ ನೆರವಾಗುವ ಪರಿಹಾರ ಕೇಂದ್ರಗಳಿವೆ. ಎಂಟರ್‌ಟೈನ್‌ಮೆಂಟ್ ಪಾರ್ಕ್, ರೆಸ್ಟೋರೆಂಟ್, ಟೀವಿ ಚಾನೆಲ್, ಪತ್ರಿಕೆ, ಶಾಪಿಂಗ್ ಕಾಂಪ್ಲೆಕ್ಸ್, ಮದುವೆ ಛತ್ರ, ಪೆಟ್ರೋಲ್ ಪಂಪ್, ಕ್ರಿಕೆಟ್ ಸ್ಟೇಡಿಯಂ, ಆರ್ಗಾನಿಕ್ ಫಾರಂ, ಫ್ಯಾಕ್ಟರಿಗಳನ್ನೂ ದೇರಾ ನಡೆಸುತ್ತಿದೆ!

ಎಂಟರ ಎಳವೆಯಲ್ಲೇ ಬಾಬಾ ಟ್ರಾಕ್ಟರ್ ಓಡಿಸಿದ್ದರಂತೆ; ಅವರು ಉದ್ಘಾಟಿಸಿದ ಜಲಾಶಯವೊಂದರಲ್ಲಿ ಈವರೆಗೆ ನೀರೇ ಬತ್ತಿಲ್ಲವಂತೆ, ಪ್ಯಾರಾಲಿಸಿಸ್ ಆದವರು ಬಾಬಾಜಿ ಕೈಗುಣದಿಂದ ಗುಣವಾಗಿದ್ದಾರಂತೆ!

ಈಗಾಗಲೆ ಹಲವು ಬಾಬಾಗಳು ಜೈಲುಕಂಬಿ ಎಣಿಸುತ್ತಿರುವಾಗ, ಈತ ಇನ್ನೂ 'ಕಿಂಗ್' ಆಗಿರಲು ಕಾರಣಗಳೇನು? ಲೋಕದಳ ಮತ್ತು ಅಕಾಲಿದಳ ಪ್ರತಿಭಟಿಸುತ್ತಿದ್ದರೂ ಈತನ ಬಂಧನ ಆಗಿಲ್ಲವೇಕೆ? ಅಲ್ಲೇ ಇರೋದು ದೇರಾದ ರಾಜಕೀಯ ಶಕ್ತಿ. 'ನನ್ನ ಅನುಯಾಯಿಗಳು ರಾಜಕೀಯ ಪಕ್ಷಗಳನ್ನು ಸೇರುವುದಿದ್ದರೆ ಅಭ್ಯಂತರವಿಲ್ಲ. ಆದರೆ ದೇರಾಗೆ ಯಾವುದೇ ರಾಜಕೀಯ ಐಡಿಯಾಲಜಿ ಇಲ್ಲ' ಎನ್ನುತ್ತಾನೆ ಬಾಬಾಜಿ. 2007ರಲ್ಲಿ ಪಂಜಾಬಿನಲ್ಲಿ ದೇರಾದ ಮುಖಂಡರು ಕಾಂಗ್ರೆಸನ್ನು ಬಹಿರಂಗವಾಗಿ ಬೆಂಬಲಿಸಿದ್ದರು. ಕಳೆದ ಅಕ್ಟೋಬರ್‌ನಲ್ಲಿ ಹರಿಯಾಣ ಚುನಾವಣೆಯಲ್ಲಿ ಬಿಜೆಪಿಯ 90 ಅಭ್ಯರ್ಥಿಗಳಲ್ಲಿ 44 ಜನ ದೇರಾಗೆ ಬಂದು ಆಶೀರ್ವಾದ ಪಡೆದ ಬಳಿಕ, ಬಿಜೆಪಿ ಅಧಿಕಾರಕ್ಕೆ ಬಂತು. 'ಸ್ವಚ್ಛ ಭಾರತ್, ಭ್ರೂಣಹತ್ಯೆ ವಿರುದ್ಧ ಕಾರ್ಯಕ್ರಮ, ಮಾದಕ ವ್ಯಸನ ಮುಕ್ತ ಭಾರತ ಮುಂತಾದ ನನ್ನ ಕಾರ್ಯಕ್ರಮಗಳನ್ನೇ ಪ್ರಧಾನಿ ನರೇಂದ್ರ ಮೋದಿ ಅನುಸರಿಸುತ್ತಿದ್ದಾರೆ' ಎನ್ನುವುದು ಬಾಬಾಜಿ ಸ್ಪಷ್ಟೋಕ್ತಿ! 47ರ ಹರೆಯದ, ಮೂವರು ಮಕ್ಕಳ ತಂದೆಯಾದ ಈ ಬಾಬಾಜಿ ಸದ್ಯಕ್ಕಂತೂ ಹರಿಯಾಣದ ಕಿಂಗ್ ಸಿಂಗ್! ■

Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65